ಸಂತೋಷವನ್ನುಂಟು ಮಾಡಿದೆ. ನಾವು ಪ್ರತಿಯೊಂದು ವರ್ಷದಲ್ಲಿ ಯಾವ್ಯಾವ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ, ಅದರಲ್ಲೂ ಮುಖ್ಯವಾಗಿ ಭೂಸಾರ ಸಂರಕ್ಷಣೆ ಕೆಲಸವನ್ನು ಎಲ್ಲೆಲ್ಲಿ ಮಾಡುತ್ತಿದ್ದೇವೆ ಎನ್ನತಕ್ಕಂಥಾದ್ದನ್ನು ಒಂದು ನಕ್ಷೆ ಮೂಲಕ ಪ್ರತಿ ಮಾನ್ಯ ಸದಸ್ಯರಿಗೂ ಕೂಡ ತಿಳಿಸತಕ್ಕಂಥ ಏರ್ಪಾಡನ್ನು ಅವರವರ ಕ್ಷೇತ್ರಗಳಲ್ಲಿ ಮಾಡಿದ್ದೇವೆ. ಏಕೆಂದರೆ ಇದು ನಿಗಾವಹಿಸಲಿ ಎನ್ನುವ ಕಾರಣಕ್ಕೋಸ್ಕರ. ಈ ಕೆಲಸ ಕಾರ್ಯಗಳು ಸಾರ್ವಜನಿಕರ ಉಸ್ತುವಾರಿಯಲ್ಲಿ ನಡೆಯಬೇಕಾಗಿರತಕ್ಕಂಥಾದ್ದು ಅತಿ ಅವಶ್ಯಕತೆ ಇದೆ. ಆದ್ದರಿಂದ ಎಲ್ಲಾ ಮಾನ್ಯ ಸದಸ್ಯರುಗಳಲ್ಲಿ ನಾನು ಮನವಿ ಮಾಡುವುದಕ್ಕೆ ಇಚ್ಛಿಪಡುತ್ತೇನೆ. ಈ ಕೆಲಸವನ್ನು ತಾವು ಮಾಡಬೇಕೆಂದು ಹೇಳುತ್ತೇನೆ.

(ಐ) ವರಾಹಿ ಯೋಜನೆಯಲ್ಲಿ ಜಮೀನು ಕಳೆದು ಕೊಂಡವರಿಗೆ ಪುನರ್‌ವಸತಿ

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ): ಸನ್ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದಲ್ಲಿ ವರಾಹಿ ಯೋಜನೆ ಪ್ರದೇಶ ಇದೆ. ಇದರ ಪರಿಹಾರ ಮತ್ತು ಅಲ್ಲಿರತಕ್ಕಂಥ ರೈತರ ಮತ್ತು ಕೃಷಿಕಾರ್ಮಿಕರ ಪರಿಹಾರ-ಪುನರ್‌ವಸತಿಗೆ ನಿರ್ಧಾರ ಮಾಡುವುದಕ್ಕೋಸ್ಕರ ಮಾನ್ಯ ಉಪಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಹೈಪವರ್ ಕಮಿಟಿ ಕಾರ್ಯನಿರ್ವಹಿಸುತ್ತಿದೆ. ಈ ಹಿಂದೆ ಇದ್ದಂಥ ಎಸ್.ಎಂ.ಕೃಷ್ಣ ಅವರ ಕಾಲದಲ್ಲಿ ಆದಂಥ ಆ ಹೈಪವರ್ ಕಮಿಟಿಯ ನಿರ್ಣಯಗಳು ಮತ್ತು ಈಗ ಹೊಸ ಸರ್ಕಾರ ಬಂದಾಗ ಮುಖ್ಯಮಂತ್ರಿಗಳು ಯಾರು ಆಗಿದ್ದಾರೆ ಶ್ರೀಮಾನ್ ಜೆ.ಎಚ್.ಪಟೇಲರು ಅವರು ಉಪಮುಖ್ಯಮಂತ್ರಿಗಳಾಗಿದ್ದಾಗ ಆಗಿರತಕ್ಕಂಥ ಹೈಪವರ್ ಕಮಿಟಿಯ ನಿರ್ಣಯಗಳು. ಯಾವುದಕ್ಕೂ ಕೂಡ ಸರ್ಕಾರಿ ಆದೇಶ ಆಗಲಿಲ್ಲ. ವರಾಹಿ ಯೋಜನೆಯಲ್ಲಿ ನೀರು ಬಂದು ಆ ರೈತರ ಜಮೀನು ಮತ್ತು ಮನೆಗಳು ಮುಳುಗಿಹೋಗಿ ಏಳೆಂಟು ವರ್ಷಗಳಾದವು. ಇದರಲ್ಲಿ ಸಾಕಷ್ಟು ಜನರಿಗೆ ಪರಿಹಾರ-ಪುನರ್‌ವಸತಿಯನ್ನು ಕೊಡುವುದಕ್ಕೆ ಬಾಕಿ ಇದ್ದರೂ ಕೂಡ ಸರ್ಕಾರಿ ಆದೇಶಕ್ಕೋಸ್ಕರ ನಿರ್ಣಯಗಳು ಇವತ್ತು ಕಾಯುತ್ತಿವೆ. ನನಗೆ ದುಃಖ ಆಗತಕ್ಕಂಥಾದ್ದು ಏನೆಂದರೆ, ಮಾನ್ಯ ಉಪಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಆಗಿರತಕ್ಕಂಥ ಈ ನಿರ್ಣಯಕ್ಕೆ, ನಮ್ಮ ಕೆ.ಪಿ.ಸಿ.ಯಿಂದ ಇದು ಸರ್ಕಾರಿ ಆದೇಶಕ್ಕೋಸ್ಕರ ರೆವಿನ್ಯೂ ಇಲಾಖೆಗೆ ಬಂದಿದೆ. ಐದು ವರ್ಷಗಳಿಂದ ಎಂ.ಎಸ್.ಬಿಲ್ಡಿಂಗ್‌ನಲ್ಲಿರುವ ನಿಮ್ಮ ರೆವಿನ್ಯೂ ಇಲಾಖೆಯಲ್ಲಿ ಆ ರೆಕಾರ್ಡುಗಳು ಧೂಳು ಹಿಡಿಯುತ್ತಾ ಬಿದ್ದಿವೆ. ಆದರೂ ಅದನ್ನು ಮಾಡುತ್ತಿಲ್ಲ. ಪರಿಹಾರ-ಪುರ್‌ವಸತಿ ಸಿಗದೆ ನನ್ನ ಕ್ಷೇತ್ರದ ಜನ ಕಣ್ಣೀರಿಡುತ್ತಿದ್ದಾರೆ. ನಾನು ಒಬ್ಬ ಶಾಸಕನಾಗಿ ಅಲ್ಲಿ ಕೆಲಸ ಮಾಡುವುದಕ್ಕೆ ತುಂಬ ತೊಂದರೆಯಾಗಿದೆ. ವರಾಹಿ ಜಲವಿದ್ಯುತ್ ಯೋಜನೆ ಊರಿಗೆ ಬೆಳಕು ಕೊಟ್ಟರೂ ಕೂಡ ನಮ್ಮ ಜನರ ಕಣ್ಣೀರು ಒರೆಸುವುದರಲ್ಲಿ ವಿಫಲವಾಗಿದೆ. ದಯವಿಟ್ಟು ಈ ಸರ್ಕಾರ ತತ್‌ಕ್ಷಣವೇ ಅದು ಪರಿಹಾರ-ಪುನರ್‌ವಸತಿ ಕೊಡುವುದಕ್ಕೆ ಸರ್ಕಾರಿ

ಆದೇಶಕ್ಕಾಗಿ ಎಲ್ಲಿ ಆ ಕಡತಗಳು ಇವೆ, ಅದನ್ನು ಏಕೆ ಇಟ್ಟಕೊಂಡಿದ್ದಾರೆ ಮತ್ತು ಇದನ್ನು ಇಟ್ಟುಕೊಂಡಿರತಕ್ಕಂಥ ಉದಾಸೀನ ಮಾಡಿರತಕ್ಕಂಥ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು ಮತ್ತೆ ಪುನರ್‌ವಸತಿ-ಪರಿಹಾರವನ್ನು ಕೊಡುವುದಕ್ಕಾಗಿ ಸರ್ಕಾರದ ಆದೇಶವನ್ನು ಹೊರಡಿಸಬೇಕೆಂದು ಹೇಳಿ ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ನಾನು ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳಿ ಮಾಹಿತಿ ಪಡೆದು ನಂತರ ಹೇಳಿಕೆ ಕೊಡುತ್ತೇನೆ. ಇವರು ಏನು ಹೇಳಿದ್ದಾರೆ ಎಂದರೆ, ನಾಲ್ಕು ವರ್ಷಗಳಿಂದ, ಪುನರ್‌ವಸತಿ ಆಗಿಲ್ಲ, ಸರ್ಕಾರಿ ಆಜ್ಞೆ ಆಗಿತ್ತು, ಒಂದು ಹೈಪವರ್ ಕಮಿಟಿ ಇದೆ ಎಂದು ಹೇಳಿದ್ದಾರೆ. ನಾನು ಅದರ ಬಗ್ಗೆ ವಿಚಾರಣೆ ಮಾಡಿ ಇವತ್ತು ಅಥವಾ ನಾಳೆ ಒಳಗಡೆ ಸಮರ್ಪಕವಾದಂಥ ಉತ್ತರವನ್ನು ಕೊಡುತ್ತೇನೆ.

(ಒ) ಹೊನ್ನಾವರ ತಾಲ್ಲೂಕಿನ ಆರಾಧನಾ ಸಮಿತಿಯ ಪಟ್ಟಿಯನ್ನು ತಿರಸ್ಕರಿಸುವುದು.

ಶ್ರೀ ಶಿವಾನಂದ ನಾಯಕ್ (ಭಟ್ಕಳ್): ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮುಜರಾಯಿ ಸಚಿವರು ಇಲ್ಲ. ಆದರೂ ಸಹ ಸರ್ಕಾರದ ಪರವಾಗಿ ಯಾರಾದರೂ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಅಧ್ಯಕ್ಷರೇ, ಸರ್ಕಾರದ ಆದೇಶದಂತೆ ಶಾಸಕರನ್ನು ಆರಾಧನಾ ಸಮಿತಿಯ ಅಧ್ಯಕ್ಷರನ್ನಾಗಿ ಮಾಡಿದ್ದಾರೆ. ಆ ಉದ್ದೇಶ ಇಟ್ಟುಕೊಂಡು ನಮ್ಮ ಹೊನ್ನಾವರ ತಾಲ್ಲೂಕಿನ ಆಶ್ರಯ ಸಮಿತಿಯ ಸಭೆಯನ್ನು 12.5.97ಕ್ಕೆ ಕರೆದು ಸಾರ್ವಜನಿಕರಿಂದ ಬಂದಿರತಕ್ಕಂಥ ಅರ್ಜಿಗಳನ್ನು ಪರಿಶೀಲನೆ ಮಾಡಿ ಆಯ್ಕೆ ಮಾಡಿ ಒಂದು ಯಾದಿಯನ್ನು ಕಳುಹಿಸಿಕೊಟ್ಟಾಯಿತು. ನಾವು ಕಳುಹಿಸಿದ ಯಾದಿಯನ್ನು ತಿರಸ್ಕಾರ ಮಾಡಿ 24.5.97ಕ್ಕೆ ಬೇರೆ ಯಾದಿಯನ್ನು ರಚನೆಮಾಡಿ ಅದಕ್ಕೆ ಹಣವನ್ನು ಮಂಜೂರು ಮಾಡಿಕೊಟ್ಟಿದ್ದಾರೆ. ನನಗೆ ಈ ರೀತಿಯ ಅನ್ಯಾಯವಾಗಿದೆ ಎಂದು ತಮಗೂ ಸಹ ಪತ್ರಬರೆದಿದ್ದೇನೆ ಮತ್ತು ಮಾನ್ಯ ಮುಜರಾಯಿ ಸಚಿವರಿಗೂ ಸಹ ಪತ್ರ ಬರೆದಿದ್ದೇನೆ. ತಮ್ಮಿಂದ ನನಗೆ ಉತ್ತರ ಬಂದಿದೆ. ಆದರೆ ಮುಜರಾಯಿ ಮಂತ್ರಿಗಳು ಉತ್ತರ ಕೊಡುವಂಥ ಸೌಜನ್ಯವನ್ನೂ ಮಾಡಲಿಲ್ಲ. ಈ ರೀತಿ ಶಾಸಕರಿಗೆ ಒಂದು ಅಧಿಕಾರವನ್ನು ಕೊಟ್ಟು ನಂತರ ಅಗೌರವ ಮಾಡುವುದು ಯಾಕೆ? ಏಕೆ ಇದನ್ನು ಮಾಡುತ್ತಿದ್ದಾರೆ? ನಾನು ಒಂದು ಪತ್ರ ಕೊಟ್ಟರೂ ಸಹಿತ ನಮಗೆ ಸರಿಯಾಗಿ ಉತ್ತರ ಕೊಡುವುದಿಲ್ಲ. ಈ ರೀತಿ ಆಗಬಾರದು ಮತ್ತು ಇದಕ್ಕೆ ಸರಿಯಾದ ಉತ್ತರ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ತಾವೇಹೇಳಿ, ಸರ್ಕಾರದ ಪರವಾಗಿ.

ಶ್ರೀ ಸಿದ್ಧರಾಮಯ್ಯ: ಮಾನ್ಯ ಅಧ್ಯಕ್ಷರೇ, ಅದರ ಬಗ್ಗೆ ಮಾಹಿತಿ ಪಡೆದು ಉತ್ತರ ಒದಗಿಸಿಕೊಡುತ್ತೇನೆ.